ಅ) ಕೆ.ಎಂ. ದೊಡ್ಡಿ ಪೋಲೀಸ್ ಠಾಣೆಯಲ್ಲಿ ಈ ಪ್ರಕರಣದ ಬಗ್ಗೆ ಮೊಕದ್ದಮೆ ಸಂಖ್ಯೆ 76 :94 ನ್ನು ದಾಖಲು ಮಾಡಿಕೊಳ್ಳಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಈ ಪ್ರಕರಣ ತನಿಖೆಯನ್ನು ಡಿ.ವೈ.ಎಸ್.ಪಿ. ಮಳವಳ್ಳಿ ಉಪ ವಿಭಾಗ ಇವರಿಗೆ ವಹಿಸಲಾಗಿದೆ.

ಇಗ್ಗಲೂರು ನೀರಾವರಿ ಯೋಜನೆ

587 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಗ್ಗಲೂರು ನೀರಾವರಿ ಯೋಜನೆ ಯಾವಾಗ ಮುಗಿಯತ್ತದೆ, ಹಾಗೂ ಅದಕ್ಕೆ ತಗಲುವ ವೆಚ್ಚ ಹಾಗೂ ಎಷ್ಟು ಎಕರೆ ನೀರಾವರಿಗೆ ಒಳಪಡುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಈ ಯೋಜನೆಯನ್ನು 1996-97ನೇ ಸಾಲಿನಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ. ಇದರ ವೆಚ್ಚ 1994-95ನೇ ಸಾಲಿನ ದರಗಳ ಪ್ರಕಾರ 35.19 ಕೋಟಿ ರೂ.ಗಳು ನೀರಾವರಿಗೆ ಒಳಪಡುವುದು 10,000 ಎಕರೆಗಳು.

ಸಣ್ಣ ನೀರಾವರಿ ಇಲಾಖಾ ನೌಕರರ ಸಂಖ್ಯೆ

666 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿರುವ ಜೂನಿಯರ್ ಅಸಿಸ್ಟೆಂಟ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್, ಎಕ್ಸಿಕ್ಯೂಟೂವ್ ಸೂಪರಿಂಟೆಂಡೆಂಟ್ ಚೀಫ್ ಇಂಜಿನಿಯರುಗಳ ಒಟ್ಟು ಸಂಖ್ಯೆ ಎಷ್ಟು?

ಆ) ಈ ಇಲಾಖೆಯ ವಿವಿಧ ಇಂಜಿನಿಯರ್‌ರನ್ನು ಹೊರತುಪಡಿಸಿ ಇನ್ನುಳಿದ ಸಿಬ್ಬಂದಿ ನೌಕರರ ಒಟ್ಟು ಸಂಖ್ಯೆ ಎಷ್ಟು?

ಇ) ಈ ಇಲಾಖೆಯ ಎಲ್ಲಾ ನೌಕರರ ಇಂಜನಿಯರುಗಳು ಸೇರಿದಂತೆ 1991-92, 92-93, 93-94, 94-95ರಲ್ಲಿ ಕೊಟ್ಟಿರುವ ವೇತನ ಭತ್ಯಗಳ ಮೊತ್ತವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ)

ಕಿರಿಯ ಇಂಜನಿಯರ್	-	66
ಆಕೃತಿ ರಚನಕಾರರು	-	27
ಸಹಾಯಕ ಇಂಜನಿಯರ್	-	112
ಸಹಾಯಕ ಕಾರ್ಯಪಾಲಕ ಇಂಜನಿಯರ್	-	31
ಕಾರ್ಯಪಾಲಕ ಇಂಜನಿಯರ್	-	20
ಅಧೀಕ್ಷಕ ಇಂಜನಿಯರ್	-	06
ಮುಖ್ಯ ಇಂಜನಿಯರ್	-	02
		264

ಆ) 316

ಇ)

ವರ್ಷ		ರೂ.
1991-92	-	8,13,07,017-00
1992-93	-	16,15,94,221-00
1993-94	-	13,88,08,399-00

1994-95	-	10,53,17,835-00
ಒಟ್ಟು	-	48,70,27,472-00

ಲೋಕಾಯುಕ್ತರಲ್ಲಿ ಸಿಕ್ಕಿಬಿದ್ದ ಸರ್ಕಾರಿ ಹಾಗೂ ಸರ್ಕಾರೇತರ ಅಧಿಕಾರಿಗಳ ಬಗ್ಗೆ

670 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕಾಯುಕ್ತರವರು 93-93, 93-94, 94-95ರಲ್ಲಿ ದಾಳಿ ಮಾಡಿ ಹಿಡಿದಿರುವ ಸರ್ಕಾರಿ ಅಧಿಕಾರಿ, ಸರ್ಕಾರೇತರ ಅಧಿಕಾರಿ ಹಾಗೂ ಕ್ಯಾಪಿಟೇಷನ್, ಡೊನೇಷನ್ ಸಂಸ್ಥೆಯ ಆಡಳಿತಗಾರರು ಇತ್ಯಾದಿಯವರ ಹೆಸರುಗಳೇನು ಹಾಗೂ ಅವರಲ್ಲಿ ದೊರೆತ ನಗದು, ಬ್ಯಾಂಕ್ ಡಿಪಾಸಿಟ್ ಹಾಗೂ ಆಭರಣಗಳ ಮೊತ್ತವೇನು?

ಆ) ಲೋಕಾಯುಕ್ತರವರು ಹಿಡಿದ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತದೆ ಬಿಟ್ಟಿರುವವರ ಹೆಸರುಗಳೇನು?

ಇ) ತಪಿತಸ್ಥರೆಂದು ಸ್ಥಿರವಾದ ಮೇಲೆ ಮುಕ್ತ ಮಾಡಲ್ಪಟ್ಟಿ ಹೆಸರುಗಳೇನು?

ಈ) ತಪ್ಪಿತಸ್ಥರೆಂದು ಸ್ಥಿರವಾದ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕದೆ ಬಿಟ್ಟವರ ಹೆಸರೇನು?

ಉ) ಲೋಕಾಯುಕ್ತ ಕಾಯ್ದೆಯನ್ನು ರದ್ದುಪಡಿಸಲಾಗುವುದೇ ಅಥವಾ ಬಿಗಿಗೊಳಿಸಲಾಗುವುದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 1992-93, 93-94, 94-95ನೇ ಸಾಲಿನಲ್ಲಿ ಆದಾಯ ಮಿತಿಮೀರಿ ಸಂಪತ್ತು ಹೊಂದಿದ್ದ 47 ಪ್ರಕರಣಗಳು ಸರ್ಕಾರಿ ನೌಕರರು ಮತ್ತು ದಾಖಲು ಮಾಡಲಾಗಿದೆ. (ವಿವರ ಪಟ್ಟಿ ಲಗತ್ತಿಸಿದೆ) ಕ್ಯಾಪಿಟೇಷನ್ ಡೊನೇಷನ್ ಸಂಸ್ಥೆಯ ಆಡಳಿತಗಾರರ ಮೇಲೆ ಈವರೆಗೂ ಪ್ರಕರಣಗಳು ದಾಖಲು ಮಾಡಿಕೊಂಡಿಲ್ಲ.

ಆ) ಆದಾಯಕ್ಕಿಂತ ಮಿತಿಮೀರಿ ಸಂಪತ್ತು ಹೊಂದಿರುವ ಪ್ರಕರಣಗಳಲ್ಲ ಆರೋಪ ಸಾಬೀತಾಗಿಲ್ಲದ ಕಾರಣ ಬಿ ವರದಿಯನ್ನು ನೀಡಲಾಗಿದೆ. (ವಿವರ ಪಟ್ಟಿ ಲಗತ್ತಿಸಿದೆ)

ಇ) ಯಾವ ಪ್ರಕರಣವು ಇಲ್ಲ

ಈ) ಯಾವ ಪ್ರಕರಣವು ಇಲ್ಲ.

ಉ) ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ನ್ನು ರದ್ದುಪಡಿಸುವುದಿಲ್ಲ.ಈ ನಿಯಮಗಳನ್ನು ಸಮಗ್ರವಾಗಿ ಪರಿಶೀಲಿಸಲಾಗುವುದು.

1992-93, 93-94,ಮತ್ತು 94-95ನೇ ಸಾಲಿನಲ್ಲಿ ಲೋಕಾಯುಕ್ತದವರು ದಾಳಿ (ಗೊತ್ತಾದ ಆಧಾಯದಕ್ಕಿಂತ ಹೆಚ್ಚಾಗಿ ಹೊಂದಿದ ಪ್ರಕರಣಗಳ ಪಟ್ಟಿ

ವರ್ಷಗಳು	ನೊಂದಾಯಿಸಿದ ಪ್ರಕರಣಗಳು	ನ್ಯಾಯಾಲಯದಲ್ಲಿ ಪ್ರಕರಣಗಳು	ಬಿ.ಅಂತಿಮ ವರದಿ ಸಲ್ಲಿಸದ ಪ್ರಕರಣಗಳು	ತನಿಪೆಯಲ್ಲಿರುವ ಪ್ರಕರಣಗಳು
1992-93	10	2	2	6
1993-94	15	-	-	15
1994-95	22	1	-	21
	47	3	2	42